# ಕಾಸರಗೋಡು ಸಿಪಿಸಿಆರ್‌ಐನಲ್ಲಿ ಕೃಷಿಕರ ಸಮಾವೇಶ

## ಕಂದಾಯ ಸಚಿವ ಇ.ಚಂದ್ರಶೇಖರನ್ ಚಾಲನೆ | ಜನಮನ ಸೆಳೆಯುತ್ತಿರುವ ಕೃಷಿ ಮೇಳ

■ ವಿಜಯವಾಣಿ ಸುದ್ದಿಜಾಲ ಕಾಸರಗೋಡು

ಭಾರತೀಯ ಕೃಷಿ ಸಂಶೋಧನಾ ಪರಿಷತ್, ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ ಕಾಸರಗೋಡು ಸ್ಥಾಪನಾ ದಿನ ಹಾಗೂ ಕೃಷಿ ವಿಜ್ಞಾನ ಕೇಂದ್ರ ಬೆಳ್ಳಿಹಬ್ಬ ಸಮಾರಂಭ ಹಾಗೂ ಆತ್ಮಾ ತಂತ್ರಜ್ಞಾನ ಸಂಗಮ ಅಂಗವಾಗಿ ಕೃಷಿಕರ ಸಮಾವೇಶ ಶುಕ್ರವಾರ ಆರಂಭವಾಯಿತು.

ಕೇರಳ ರಾಜ್ಯ ಕಂದಾಯ ಖಾತೆ ಸಚಿವ ಇ.ಚಂದ್ರಶೇಖರನ್ ಸಮಾರಂಭ ಉದ್ಘಾಟಿಸಿದರು. ಕೃಷಿ ವಲಯದ ಅಭಿವೃದ್ಧಿಯಿಂದ ಮಾತ್ರ ದೇಶಕ್ಕೆ ಸುಭಿಕ್ಷೆ ಸಾಧ್ಯ. ಸೂಕ್ತ ಮಾರುಕಟ್ಟೆ ಹಾಗೂ ಕೃಷಿ ಉತ್ಪನ್ನಗಳ ಸಂಸ್ಕರಣೆ ಕೊರತೆಯಿಂದ ಕೃಷಿಕನಿಗೆ ಸೋಲಾಗುತ್ತಿದೆ. ಕೃಷಿ ಉತ್ಪನ್ನಗಳಿಗೆ ನ್ಯಾಯ ಬೆಲೆ ಲಭಿಸದೆ ಕೃಷಿಕ ಕಂಗಾಲಾಗುತ್ತಿದ್ದಾನೆ. ಕೃಷಿಕರನ್ನು ಕಡೆಗಣಿಸಿ, ಉದ್ದಿಮೆದಾರರನ್ನು ಮಾತ್ರ ಪೋಷಿಸುವ ಮನೋಭಾವ ದೂರಾಗಬೇಕು ಎಂದು ಹೇಳಿದರು.

ಜಿಲ್ಲಾ ಪ್ರಿನ್ಸಿಪಲ್ ಕೃಷಿ ಅಧಿಕಾರಿ ಟಿ.ಆರ್.ಉಷಾದೇವಿ, ಸಿಪಿಸಿಆರ್‌ಐ ಐಎಂಸಿ ಸದಸ್ಯ ಸುರೇಶ್ ಕುಮಾರ್ ಶೆಟ್ಟಿ ಅತಿಥಿಯಾಗಿದ್ದರು. ಡಾ.ಪಿ.ಚೌಡಪ್ಪ ಸ್ವಾಗತಿಸಿದರು. ಡಾ.ಸಿ.ತಂಬಾನ್ ವಂದಿಸಿದರು. ನೆಲ, ಜಲ ಸಂರಕ್ಷಣೆ ತಂತ್ರಜ್ಞಾನ, ಉತ್ತಮ ಮೌಲ್ಯದ ಹಾಗೂ ಕಡಿಮೆ ಬಳಕೆಯಲ್ಲಿರುವ ಹಣ್ಣುಗಳ ಕೃಷಿ ಬಗ್ಗೆ ಕಾರ್ಯಾಗಾರ ನಡೆಯಿತು.

**ಇಂದು ವಿಶೇಷ ಉಪನ್ಯಾಸ**

**ಜ.6ರಂದು ಕೊಕ್ಕೋ** ಉತ್ಪಾದನೆ-ಸಂಸ್ಕರಣೆ, ಮೀನು ಸಾಕಣೆ, ಹೈನುಗಾರಿಕೆ ಜತೆಗೆ ತೆಂಗಿನ ಬಿಳಿ ಕೀಟ ಹಾವಳಿ ಬಗ್ಗೆ ಪ್ರತ್ಯೇಕ ಉಪನ್ಯಾಸ ನಡೆಯಲಿದೆ. 7ರಂದು ಹಸಿರು ಉದ್ಯಮ, ಕೃಷಿ ಹೈನುಗಾರಿಕೆಯ ಸಬಲೀಕರಣದ ಬಗ್ಗೆ ಉಪನ್ಯಾಸ ನಡೆಯುವುದು.



ಸಿಪಿಸಿಆರ್‌ಐನಲ್ಲಿ ಆರಂಭಗೊಂಡ ಕೃಷಿ ಮೇಳದಲ್ಲಿ ಸಲಕರಣೆ ಮೂಲಕ ಸೀಯಾಳ ತುಂಡರಿಸುತ್ತಿರುವ ಶಾಸಕ ಇ.ಚಂದ್ರಶೇಖರನ್.

### ಜನಾಕರ್ಷಣೆಯ ಕೃಷಿ ಮೇಳ

ಆರಂಭದ ದಿನದಂದೇ ಕೃಷಿ ಮೇಳಕ್ಕೆ ಜನಸಾಗರ ಹರಿದು ಬಂದಿತ್ತು. ಕೃಷಿ ಉತ್ಪನ್ನಗಳ ಪ್ರದರ್ಶನ, ಮಾರಾಟಕ್ಕಾಗಿ ಸುಮಾರು 150 ಮಳಿಗೆಗಳನ್ನು ಸಿಪಿಸಿಆರ್‌ಐ ವತಿಯಿಂದ ಅಳವಡಿಸಲಾಗಿದ್ದು, ಬಹುತೇಕ ಭರ್ತಿಯಾಗಿವೆ. ಸಚಿವ ಇ.ಚಂದ್ರಶೇಖರನ್ ಮಳಿಗೆಗೆ ಭೇಟಿ ನೀಡಿ ಕೃಷಿ ವಸ್ತುಪ್ರದರ್ಶನ ವೀಕ್ಷಿಸಿದರು. ಕೇರಳ, ಕರ್ನಾಟಕ, ತಮಿಳುನಾಡಿನ ವಿವಿಧ ಸಂಘಟನೆಗಳು ಮೇಳದಲ್ಲಿ ಭಾಗವಹಿಸುತ್ತಿವೆ. ಪುತ್ತೂರು ಕಬಕದ ಕಾಕ್ ಅನಿಲ್ಸ್ ಫಾರ್ಮ್‌ನಲ್ಲಿ ವರ್ಷಪೂರ್ತಿ ಫಲ ನೀಡುವ ಹಲಸಿನ ತಳಿ ಜನರನ್ನು ಆಕರ್ಷಿಸುತ್ತಿವೆ.



ವಿಜಯವಾಣಿ ಚಿತ್ರಗಳು

### ಗಮನ ಸೆಳೆದ ಬಾಳೆ

ತಮಿಳುನಾಡು ಕೊಯಂಬತ್ತೂರಿನ ತಿರುಚ್ಚಿ ನೇಂದ್ರ ಬಾಳೆ ಮೇಳದಲ್ಲಿ ಗಮನ ಸೆಳೆಯಿತು. ಗರಿಷ್ಠ 60 ಕಿ.ಗ್ರಾಂ ತೂಕದ ಬಾಳೆಗೊನೆಗಳು ವೀಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು. ನೇಂದ್ರ, ಪೂವನ್, ಜಿ-9 ಸಹಿತ ನಾನಾ ತಳಿಯ ಬಾಳೆ ಗಿಡಗಳು ಮಳಿಗೆಯಲ್ಲಿ ಮಾರಾಟಕ್ಕೆ ಲಭ್ಯವಿವೆ.

